**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालयः**

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.


ಸಂಖ್ಯೆ: ಕಸಂವಿ/ಪರೀಕ್ಷಾಂಗ/ದ್ವಾ..ತ್ರ..ದೀ.ಘ.ಸಂ.ಕ/2025-26 ದಿನಾಂಕ: .11.03.2026

## ದರಪಟ್ಟಿ ಆಹ್ವಾನ

**ವಿಷಯ: ದ್ವಾದಶ ಹಾಗೂ ತ್ರಯೋದಶ ದೀಕ್ಷಾಂತ ಘಟಿಕೋತ್ಸವಕ್ಕೆ ಸ್ವರ್ಣಪದಕಗಳನ್ನು ಸಿದ್ಧಪಡಿಸಿಕೊಡಲು ದರಪಟ್ಟಿಗಳನ್ನು ಕರೆಯುವ ಬಗೆಗೆ.**

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ಕಂಡಿಕೆ ಸಂಖ್ಯೆ: 41; ದಿನಾಂಕ: 11.03.2026

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2023-24ನೇ ಸಾಲಿನ ದ್ವಾದಶ ಹಾಗೂ 2024-25ನೇ ಸಾಲಿನ ತ್ರಯೋದಶ ದೀಕ್ಷಾಂತ ಘಟಿಕೋತ್ಸವದಲ್ಲಿ ಬಿ.ಎ/ಶಾಸ್ತ್ರೀ/ಎಂ.ಎ/ಆಚಾರ್ಯ/ವಿದ್ಯಾವಾರಿಧಿ ವಿದ್ಯಾರ್ಥಿಗಳಿಗೆ ಘಟಿಕೋತ್ಸವದಲ್ಲಿ ಸ್ವರ್ಣಪದಕಗಳನ್ನು ನೀಡಬೇಕಾಗಿದ್ದು, ಈ ಕೆಳಕಂಡ ವಿವರ ಹಾಗೂ ಷರತ್ತಿಗೊಳಪಟ್ಟು ಸ್ವರ್ಣಪದಕಗಳನ್ನು ಸಿದ್ಧಪಡಿಸಿಕೊಡಲು ಆಸಕ್ತ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ವಿವರ | ಸಂಖ್ಯೆ |
|---|---|---|
| 1 | ದತ್ತಿನಿಧಿ ಸ್ಥಾಪಿಸಿರುವ ಸಂಸ್ಥೆಯ ವಿವರಗಳು ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಲಾಂಛನ ಒಳಗೊಂಡ 13 ಗ್ರಾಮ್ ರಜತ ಪದಕಕ್ಕೆ ಸುವರ್ಣಲೇಪಿತ ಪದಕಗಳು. | ಅಂದಾಜು 53 |

**ಷರತ್ತುಗಳು:**

- ಮುಚ್ಚಿದ ಲಕೋಟೆಯ ಮೇಲೆ **'ಸ್ವರ್ಣಪದಕಗಳನ್ನು ಸಿದ್ಧಪಡಿಸಲು ದರಪಟ್ಟಿ'** ಎಂದು ಬರೆಯಬೇಕು.
- ದರಪಟ್ಟಿ ಆಹ್ವಾನಿಸಿದ ದಿನಾಂಕದಿಂದ ಏಳು ಕಾರ್ಯನಿರತ ದಿನಗಳೊಳಗಾಗಿ ಅಂದರೆ ದಿನಾಂಕ: 20.03.2026 ರ ಸಂಜೆ 5.30 ಗಂಟೆಯ ಒಳಗಾಗಿ ದರಪಟ್ಟಿಗಳನ್ನು **'ಕುಲಸಚಿವರು(ಮೌಲ್ಯಮಾಪನ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು-560018'** ಈ ವಿಳಾಸಕ್ಕೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಬೇಕು. ಅಂಚೆಯ ಮೂಲಕ ತಲುಪಿಸುವಾಗ ಆಗುವ ವಿಳಂಬಕ್ಕೆ ವಿಶ್ವವಿದ್ಯಾಲಯವು ಜವಾಬ್ದಾರರಾಗಿರುವುದಿಲ್ಲ.
- ದರಪಟ್ಟಿಯನ್ನು ದಿನಾಂಕ: 23.03.2026ರ ಮಧ್ಯಾಹ್ನ 12.00ಕ್ಕೆ ತೆರೆಯಲಾಗುವುದು.
- ಸ್ವರ್ಣಪದಕಗಳನ್ನು ಸಿದ್ಧಪಡಿಸಿ ಸರಬರಾಜು ಮಾಡಲು ಯಾವುದೇ ಮುಂಗಡವನ್ನು ನೀಡಲಾಗುವುದಿಲ್ಲ.
- ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
- ದರಪಟ್ಟಿಯನ್ನು ಸಲ್ಲಿಸುವವರು ಕಡ್ಡಾಯವಾಗಿ GSTIN ಸಂಖ್ಯೆ ಹಾಗೂ PAN ಸಂಖ್ಯೆಯ ದಾಖಲೆಯನ್ನು ಲಗತ್ತಿಸಬೇಕು.
- ದರಪಟ್ಟಿಯಲ್ಲಿ ನಮೂದಿಸಿರುವ ದರಗಳು ತೆರಿಗೆ ಹಾಗೂ ಸೇವೆಯ ಮೊತ್ತವನ್ನು ಒಳಗೊಂಡಿರಬೇಕು ಹಾಗೂ ಅದನ್ನು ಸ್ಪಷ್ಟವಾಗಿ ನಮೂದಿಸಿರಬೇಕು.
- ಪ್ರತಿ ಸಂಸ್ಥೆಗೆ ಒಂದು ದರಪಟ್ಟಿಯನ್ನು ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ.
- ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.

- ಪದಕಗಳಲ್ಲಿ ವಿಶ್ವವಿದ್ಯಾಲಯದ ಲಾಂಛನ ಹಾಗೂ ಇತರ ವಿವರಗಳಿರಬೇಕು.
- ವಿಶ್ವವಿದ್ಯಾಲಯದ ಲಾಂಛನ ಹಾಗೂ ವಿವರಗಳನ್ನು ಬೇರೆ ಯಾವುದೇ ಉದ್ದೇಶಗಳಿಗೆ ಬಳಸಕೂಡದು.
- ದರಪಟ್ಟಿಯಲ್ಲಿ ವೇಸ್ಟೇಜ್ ಮತ್ತು ಮೇಕಿಂಗ್ ಚಾರ್ಜಸ್ ಗಳನ್ನು ಸ್ಪಷ್ಟವಾಗಿ ನಮೂದಿಸುವುದು.
- ಚಿನ್ನದ ಪದಕಗಳಿಗೆ ಉತ್ತಮ ಬ್ಯಾಡ್ಜ್ ಮತ್ತು ಬಾಕ್ಸ್ ಗಳನ್ನು ನೀಡುವುದು.
- ಅಂತಿಮ ಆದೇಶವನ್ನು ನೀಡುವ ಸಂದರ್ಭದಲ್ಲಿ ಶೇಕಡಾ 10 ರಷ್ಟು ಸಂಖ್ಯೆ ಹೆಚ್ಚು ಅಥವಾ ಕಡಿಮೆ ಆಗಬಹುದು. ಅಂತಿಮ ಆದೇಶದಲ್ಲಿ ನೀಡುವ ಸಂಖ್ಯೆಗನುಗುಣವಾಗಿ ದರಪಟ್ಟಿಯಲ್ಲಿ ಸೂಚಿಸಿದ ಮೊತ್ತಕ್ಕನುಗುಣವಾಗಿ ಪದಕಗಳನ್ನು ಸಿದ್ಧಪಡಿಸಿ ನೀಡಬೇಕು.

**ಆದೇಶದ ಮೇರೆಗೆ,**

ಕುಲಸಚಿವರು (ಮೌಲ್ಯಮಾಪನ)

Registrar (Evaluation)
Karnataka Samskrita Vishwavidyalaya
Bengaluru - 560 018.

ಪ್ರತಿಗಳು:

1. **ಮಾನ್ಯ ಕುಲಪತಿಗಳ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
2. **ಮಾನ್ಯ ಕುಲಸಚಿವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
3. **ಹಣಕಾಸು ಅಧಿಕಾರಿಗಳ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
4. ಸೂಚನಾ ಫಲಕ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣ.
5. ಕಛೇರಿ ಪ್ರತಿ.